# ಸೂಪರ್ ಪವರ್ ಸೈಕಲ್

■ ಚಿತ್ರ –ಲೇಖನ:
**ಶಿವಲಿಂಗ ಸಿದ್ನಾಳ**




ಸೂಪರ್ ಪವರ್ ಸೈಕಲ್ ಅನ್ವೇಷಣೆ ಮಾಡಿ ರಾಷ್ಟ್ರಮಟ್ಟದಲ್ಲಿ ಪ್ರಥಮ ಸ್ಥಾನ ಬಾಚಿಕೊಂಡ ಮಹಾಲಿಂಗಪುರದ ಕೆಎಲ್ಇ ಪಾಲಿಟೆಕ್ನಿಕ್ ಕಾಲೇಜಿನ ತಂಡ.

'ಥ್ರೀ ಈಡಿಯಟ್ಸ್' ಚಿತ್ರ ಕಾಲೇಜು ಯುವಕರಲ್ಲಿ ಹೊಸ ಸಂಚಲನವುಂಟು ಮಾಡಿದ್ದು ನಿಮಗೆ ಗೊತ್ತೇ ಇದೆ. 'ಬ್ರೇನ್‌ಫುಲ್ ಥಿಯರಿಗಿಂತ ಹಾರ್ಟ್‌ಫುಲ್ ಪ್ರ್ಯಾಕ್ಟಿಕಲ್ ಲೇಸು' ಎಂಬುದನ್ನು ಬಹು ಮಾರ್ಮಿಕವಾಗಿ ಸಾರಿದ ಚಿತ್ರವದು.

ಬಾಗಲಕೋಟ ಜಿಲ್ಲೆಯ ಮಹಾಲಿಂಗಪುರ ನಗರದಲ್ಲಿರುವ ಕೆಎಲ್ಇ ಪಾಲಿಟೆಕ್ನಿಕ್‌ನ ವಿದ್ಯಾರ್ಥಿಗಳು 'ಥ್ರೀ ಈಡಿಯಟ್ಸ್' ಸಿನಿಮಾ ಸ್ಫೂರ್ತಿಯಿಂದ 'ಸಿಕ್ಸ್ ಜೀನಿಯಸ್'ಗಳಾಗಿ ಹೊರಹೊಮ್ಮಿದ್ದಾರೆ. 6 ಜನ ವಿದ್ಯಾರ್ಥಿಗಳು ಏನಾದರೊಂದು ಡಿಫರೆಂಟಾಗಿ ಮಾಡಬೇಕೆಂದು ನಿರ್ಧರಿಸಿ, ಒಂದು ಪ್ರಾಜೆಕ್ಟ್ ಬಗ್ಗೆ ತಿಂಗಳುಗಳ ಕಾಲ ತಲೆ ಕೆಡಿಸಿಕೊಂಡು, ತುಂಬಾ ಸರಳ ಮತ್ತು ವಿಶಿಷ್ಟ ಸೂಪರ್ ಪವರ್ ಸೈಕಲ್‌ನ ಮಾದರಿಯೊಂದನ್ನು ಸಿದ್ಧಪಡಿಸಿದ್ದಾರೆ. ಈ ಅನ್ವೇಷಣೆಗಾಗಿ ರಾಷ್ಟ್ರಮಟ್ಟದಲ್ಲಿ ಪ್ರಥಮ ಸ್ಥಾನವನ್ನೂ ಪಡೆದುಕೊಂಡಿದ್ದಾರೆ.

ಅಪರಾಧಗಳು ಹೆಚ್ಚುತ್ತಿರುವ ಇಂದಿನ ಅಭದ್ರತೆಯ ದಿನಗಳಲ್ಲಿ ಹೆಣ್ಣು ಮಕ್ಕಳು ಜಾಗಿಂಗ್ ಮತ್ತು ವಾಕಿಂಗ್ ಮಾಡಲು ಹೊರಗಡೆ ಹೋಗುವುದು ಸುರಕ್ಷಿತವಲ್ಲ. ಆದ್ದರಿಂದ ಮನೆಯಲ್ಲೇ ವ್ಯಾಯಾಮ ಮಾಡಿ ಮೈ ಕರಗಿಸುವುದರ ಜತೆ ಇನ್ನೂ ಹೆಚ್ಚಿನ ನಾಲ್ಕಾರು ಲಾಭ ಪಡೆಯಬಹುದು. ಹೌದು! ಮಹಿಳೆಯರು ಮನೆಯಲ್ಲಿ ಸ್ಟ್ಯಾಂಡಿಂಗ್ ಸೈಕಲ್ ತುಳಿಯುತ್ತಲೇ ವಾರ್ಮ್‌ಅಪ್ ಮಾಡಬಹುದು. ವ್ಯಾಯಾಮ ಮುಗಿಯುವುದರೊಳಗೆ ಅವರ ಮೊಬೈಲ್ ಚಾರ್ಜ್ ಆಗುತ್ತದೆ. ಬಲ್ಬ್ ಉರಿಯುತ್ತದೆ. ಅಷ್ಟೇ ಯಾಕೆ ಗ್ರೈಂಡರ್‌ನಲ್ಲಿ ಚಟ್ನಿ ಕೂಡ ರೆಡಿ ಆಗುತ್ತದೆ! ಇದು ಈ ಸೈಕಲ್‌ನ ವಿಶೇಷ.

ಇದಕ್ಕೆ ವಿದ್ಯುತ್ ಬೇಕಾಗಿಲ್ಲ. ತಮ್ಮ ಪಾಡಿಗೆ ತಾವು ಸೈಕಲ್ ತುಳಿಯುತ್ತಿದ್ದರೆ ಸಾಕು! ಅಚ್ಚರಿಯಾದರೂ ಇದು ಸತ್ಯ.! ಮಹಾಲಿಂಗಪುರ ಕೆಎಲ್ಇ ಪಾಲಿಟೆಕ್ನಿಕ್‌ನ ಮೆಕ್ಯಾನಿಕ್ ವಿಭಾಗದ ವಿದ್ಯಾರ್ಥಿಗಳು ಇಂಥದ್ದೊಂದು ಅನ್ವೇಷಣೆ ಮಾಡಿದ್ದಾರೆ.

ದೆಹಲಿಯ ಐ.ಎಸ್.ಟಿ.ಇ ಸ್ಟೂಡೆಂಟ್ ಚಾಪ್ಟರ್ ಸಂಸ್ಥೆ ಪ್ರತಿವರ್ಷದಂತೆ ಚಿಕ್ಕೋಡಿಯ ಸಿ.ಬಿ.ಕೋರೆ ಪಾಲಿಟೆಕ್ನಿಕ್‌ನಲ್ಲಿ ಟೆಕ್ನೋವಿಷನ್–2014 ಎಂಬ ರಾಷ್ಟ್ರಮಟ್ಟದ ಪ್ರಾಜೆಕ್ಟ್ ಎಗ್ಸಿಬಿಷನ್ (ಮಾದರಿ ಪ್ರದರ್ಶನ)ಏರ್ಪಡಿಸಿತ್ತು. ಕರ್ನಾಟಕ, ಮಹಾರಾಷ್ಟ್ರ ಹಾಗೂ ಇತರ ರಾಜ್ಯಗಳಿಂದ 50ಕ್ಕೂ ಹೆಚ್ಚು ಕಾಲೇಜುಗಳು ಭಾಗವಹಿಸಿದ್ದವು. ಆ ಪೈಕಿ ಮಹಾಲಿಂಗಪುರದ ಕೆಎಲ್ಇ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಅನ್ವೇಷಣೆ ಮಾಡಿದ 'ಪೆಡಲ್ ಆಪರೇಟೆಡ್ ವೆಟ್ ಗ್ರೈಂಡರ್ ವಿಥ್ ಪವರ್ ಜನರೇಶನ್' ಎಂಬ ಹೆಸರಿನ ಮಾದರಿ ಪ್ರದರ್ಶನಗೊಂಡು ರಾಷ್ಟ್ರಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿದೆ.

ಮೆಕ್ಯಾನಿಕ್ ವಿಭಾಗದಲ್ಲಿ ಮಲ್ಲು ಹುಣಶಿಕಟ್ಟಿ ಮಾರ್ಗದರ್ಶನದಲ್ಲಿ ಸಚಿನ್ ಪಾಟೀಲ, ನವಾಜ ದೊಡಮನಿ, ರಾಹುಲ ಮದರಖಂಡಿ, ಮಲ್ಲಪ್ಪ ಗುಡಿ, ಮಹೇಶ ತುಪ್ಪದ, ಬಸವರಾಜ ಅಂಬಲಜೇರಿ ಸೇರಿ ಈ ಪ್ರಾಜೆಕ್ಟ್ ಸಿದ್ಧಪಡಿಸಿದ್ದಾರೆ.

ಈ 6 ವಿದ್ಯಾರ್ಥಿಗಳು ಸೇರಿ ಕೇವಲ ಒಂದು ತಿಂಗಳಲ್ಲಿ 5000 ರೂಪಾಯಿ ವೆಚ್ಚದಲ್ಲಿ ತಮ್ಮ ಕಾಲೇಜಿನ ವರ್ಕ್‌ಶಾಪ್‌ನಲ್ಲಿಯೇ ಸಿದ್ಧಪಡಿಸಿದ ಈ ಸೈಕಲ್‌ಗೆ ಈಗ ತುಂಬಾ ಬೇಡಿಕೆಯಿದೆ. ಮನೆ, ಹೋಟೆಲ್ ಮತ್ತು ಹಾಸ್ಟೆಲ್‌ಗಳಲ್ಲಿ ಅಳವಡಿಸಬಹುದಾದ ಈ ಮಾದರಿಯನ್ನು ಆರ್ಡರ್ ಕೊಟ್ಟರೆ ಕೇವಲ ಒಂದು ವಾರದಲ್ಲಿ ಸಿದ್ಧಪಡಿಸಬಹುದು.

ಇಲೆಕ್ಟ್ರಿಕಲ್ ವಿಭಾಗದಲ್ಲಿ ಆನಂದ ಮಾಸ್ತಿ ಮಾರ್ಗದರ್ಶನದಲ್ಲಿ ಸಿದ್ಧಗೊಂಡ 'ಮೈಕ್ರೋ ಕಂಟ್ರೋಲ್ಡ್ ಬೇಸ್ಡ್ ಸ್ಪೀಡ್ ಸಿಂಕ್ರೋನೈಜೇಶನ್ ಅಂಡ್ ಟ್ರಿಪ್ ಸಿಕ್ವೆನ್ಸ್ ರಿಕಾರ್ಡರ್' ಎಂಬ ಪ್ರಾಜೆಕ್ಟ್ ಎರಡನೇ ಸ್ಥಾನ ಪಡೆದರೆ, ಸಿವಿಲ್ ವಿಭಾಗದಲ್ಲಿ ಪಿ.ಎ.ಪಾಟೀಲ ಮಾರ್ಗದರ್ಶನದಲ್ಲಿ 'ಡಿಸೈನ್ ಅಂಡ್ ಪ್ಲಾನಿಂಗ್ ಆಫ್ ಒಲಿಂಪಿಕ್ ಸ್ಟೇಡಿಯಂ' ಎಂಬ ಪ್ರಾಜೆಕ್ಟ್ ತೃತೀಯ ಸ್ಥಾನ ಪಡೆದಿದೆ.

ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಈ ಮೂರು ಪ್ರಾಜೆಕ್ಟ್‌ಗಳ ಜತೆ ಇನ್ನೂ 20ಕ್ಕೂ ಹೆಚ್ಚು ಆವಿಷ್ಕಾರಗಳ ಪ್ರಾತ್ಯಕ್ಷಿಕೆ ನಡೆಸಲಾಯಿತು. ಒಂದಕ್ಕಿಂತ ಒಂದು ವಿಭಿನ್ನ ವಿಶಿಷ್ಟ ಮತ್ತು ವಿನೂತನವಾಗಿದ್ದು 'ಅವಶ್ಯಕತೆಯೇ ಅನ್ವೇಷಣೆಯ ತಾಯಿ ' ಎಂಬಂತೆ ಮುಂದಿನ ಪೀಳಿಗೆಯ ಅಗತ್ಯಗಳನ್ನೇ ಒತ್ತಿ ಹೇಳುವಂತಿದ್ದವು. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಕಲಿಕೆಯ ಜತೆ ಕಲಾ ಪ್ರದರ್ಶನ ಮಾಡಿ ಸಾಧನೆ ಮಾಡಿದ್ದು ಶ್ಲಾಘನೀಯ.

ಪ್ರಾಚಾರ್ಯ ಎಸ್.ಐ.ಕುಂದಗೋಳ ಅವರ ಪ್ರಕಾರ, 'ಇದರ ಪೆಡಲ್ ಅಗಲವಾಗಿ ಇರುವುದರಿಂದ ಸುಲಭವಾಗಿ ಹೊಟ್ಟೆ ಕರಗಿಸಬಹುದು, ನಿರಂತರ ಬಳಸಿದರೆ 'ಸಿಕ್ಸ್ ಪ್ಯಾಕ್ ಅಬ್ಸ್' ಕೂಡಾ ಸಾಧ್ಯ. ಪೆಡಲ್‌ನ ಚಕ್ರಕ್ಕೆ ಉದ್ದನೆ ಬೆಲ್ಟ್ ಮೂಲಕ ಇನ್ನೊಂದು ಚಕ್ರ ಮತ್ತು ಅರ್ಮೇಚರ್(ಡೈನಮೋ) ಅಳವಡಿಸಿದ್ದು, ಪೆಡಲ್ ತುಳಿತದ ಒತ್ತಡದಿಂದ ವಿದ್ಯುತ್ ತಯಾರಾಗಿ ಅದರಿಂದ ಗ್ರೈಂಡರ್ ತಿರುಗಿಸಬಹುದು. ಮೊಬೈಲ್ ಚಾರ್ಜಿಂಗ್ ಮಾಡುತ್ತಲೇ ಬಲ್ಬ್ ಕೂಡ ಉರಿಸಬಹುದು. ಉಳಿದ ಎನರ್ಜಿಯನ್ನು ಒಂದು ಬ್ಯಾಟರಿಯಲ್ಲಿ ಸೇವ್ ಮಾಡಿ ಅಗತ್ಯ ಬಿದ್ದಾಗ ಬಳಸಿಕೊಳ್ಳಬಹುದು.'